**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಗಳವರ ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

# ಓ ಎಸ್ ನಂ. 17/2021

ಪಿ ಡಬ್ಲ್ಯೂ: 1

ಸಾಕ್ಷಿಯ ಹೆಸರು : ಶ್ರೀಮತಿ ಕಲಾವತಿ
ಗಂಡನ ಹೆಸರು : ಕುಮಾರಾಚಾರ್
ವಯಸ್ಸು : 49 ವರ್ಷ
ಉದ್ಯೋಗ : ಗೃಹಿಣಿ
ವಾಸ : ದಾವಣಗೆರೆ.

ದಿನಾಂಕ 09-11-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆಃ ವಾದಿ ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ

ನಾನು ದಾವೆಯಲ್ಲಿ ಮೊದಲನೇ ವಾದಿ ಇರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಹೇಳಿಕೆ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯವೆಲ್ಲಾ ಸತ್ಯವಾಗಿರುತ್ತದೆ. ಅದನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ. ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಗುರುತಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ವಂಶವೃಕ್ಷವನ್ನು ನಿಪಿ-1 ಎಂದು, ನನ್ನ ಅಜ್ಜಿಯ ಮರಣ ಪ್ರಮಾಣ ಪತ್ರವನ್ನು ನಿಪಿ-2 ಎಂದು, ನನ್ನ ತಾಯಿ ಮರಣ ಪ್ರಮಾಣ ಪತ್ರವನ್ನು ನಿಪಿ-3 ಎಂದು, ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನಿಪಿ-4 ಎಂದು, ಸರ್ವೆ ನಂ.206 ರ ಪಹಣಿಯನ್ನು ನಿಪಿ-5 ಎಂದು, ಮ್ಯುಟೇಷನ್ ರಿಜಿಸ್ಟರನ್ನು ನಿಪಿ-6 ಎಂದು, ಸರ್ವೆ ನಂ.116/ಪಿ1 ರ ಪಹಣಿಯನ್ನು ನಿಪಿ-7 ಎಂದು, ಎಂ ಆರ್ ವಹಿಯನ್ನು ನಿಪಿ-8 ಎಂದು, ಅಸೆಸ್ಮೆಂಟ್ ಎಕ್ಸಟ್ರಾಕ್ಟನ್ನು ನಿಪಿ-9

ಎಂದು, ಇ-ಸ್ವತ್ತನ್ನು ನಿಪಿ-10 ಎಂದು, ಕಟ್ಟಡಗಳ ತೆರಿಗೆ ಬಾಬ್ತು ಬೇಡಿಕೆ, ವಸೂಲಾತಿ ಮತ್ತು ಬಾಕಿ ರಿಜಿಸ್ಟರನ್ನು ನಿಪಿ-11 ಎಂದು, ದಾನಪತ್ರದ ದೃಡೀಕೃತ ನಕಲನ್ನು ನಿಪಿ-12 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.